ಪುಣ್ಯ ನಗರಿಯಲ್ಲೊಂದು ಅಪೂರ್ವ ಸಂಸ್ಥೆ

ರಾಮಕೃಷ್ಣ ಮಿಷನ್ ಸೇವಾಶ್ರಮ, ವಾರಾಣಸಿ

ಪಿ. ಉಷಾ

ರಾಮಕೃಷ್ಣ ಮಿಷನ್ನಿನ ಅತ್ಯಂತ ಹಳೆಯ ಸೇವಾಸಂಸ್ಥೆಗಳಲ್ಲಿ ವಾರಾಣಸಿಯ ಸೇವಾಶ್ರಮವೂ ಒಂದು. ಸ್ವಾಮಿ ವಿವೇಕಾನಂದರೇ ಸ್ವಂತ ಇದಕ್ಕೆ ತಮ್ಮ ಆಶೀರ್ವಾದವನ್ನು ಮಾಡಿದ್ದಾರೆ; ಮನವಿಪತ್ರವನ್ನು ಬರೆದುಕೊಟ್ಟಿದ್ದಾರೆ. ಈ ಪುಣ್ಯ ಸಂಸ್ಥೆಯ ರೋಚಕ ಗಾಥೆಯನ್ನು ಬರೆದುಕೊಟ್ಟಿರುವ ಲೇಖಕಿ, ವಾರಾಣಸಿಯ ಈ ಸಂಸ್ಥೆಯಲ್ಲಿಯೇ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಹಲವು ಲೇಖನಗಳು ಈಗಾಗಲೇ ವಿವೇಕಪ್ರಭ ಪತ್ರಿಕೆಯಲ್ಲಿ ಪ್ರಕಟವಾಗಿವೆ.

ಸ್ವಾಮಿ ವಿವೇಕಾನಂದರೊಮ್ಮೆ ಸಂಘಟನಾಶಕ್ತಿಯ ಬಗ್ಗೆ ತಮ್ಮ ಗುರುಭ್ರಾತೃಗಳಿಗೆ ವಿವರಿಸುತ್ತಿದ್ದಾಗ, ಸ್ವಾಮಿ ಅದ್ಭುತಾನಂದರು ಕೇಳಿದರು, "ಸೋದರ, ಈ ಕ್ರಿಯಾ ಕಲಾಪಗಳನ್ನೇಕೆ ಪ್ರಾರಂಭಿಸಿರುವೆ? ಜಪ-ಧ್ಯಾನಗಳಿಗೆ ಇವು ಬಾಧಕವಲ್ಲವೇ?"

ಒಡನೆಯೇ ಸ್ವಾಮೀಜಿಯವರು ಗುಡುಗಿದರು, "ವೇದಿಕೆಯ ಮೇಲಿನ ದೇವರ ಪಟದೆದುರು ನಾಲ್ಕಾರು ಹೂವುಗಳನ್ನೆಸೆದು ಕರೆದಾಕ್ಷಣವೇ ಭಗವಂತನೇನು ನಿಮ್ಮೆದುರು ಬಂದು ನಿಲ್ಲುವನೆ? ಹೇಳು... ನೀವೆಲ್ಲಾ ಭಕ್ತರು! ಓಹ್, ನೀವು ಯಾವುದನ್ನು ಭಕ್ತಿ ಎನ್ನುವಿರೊ ಅದು ಮನುಷ್ಯನನ್ನು ದುರ್ಬಲಗೊಳಿಸುವ ಭಾವುಕತೆಯಷ್ಟೇ. ಅಂಥ ಭಕ್ತಿಯಿಂದೇನು ಪ್ರಯೋಜನ? ತಮ್ಮ ಸ್ವಂತ ಮುಕ್ತಿಯನ್ನು ಮಾತ್ರವೇ ಪಡೆಯುವುದರಲ್ಲಿ ನಿರತರಾಗಿ, ಪರರ ದುಃಖವನ್ನು ಕಂಡು ಮರುಗದ ಸ್ವಾರ್ಥಿಗಳಲ್ಲಿ ನನಗೆ ಯಾವ ಭರವಸೆಯೂ ಇಲ್ಲ. ನಿಮಗೆ ಗೊತ್ತೇನು? ಒಂದು ದಿನ ನಾನು ಗುರುದೇವ ರಾಮಕೃಷ್ಣರನ್ನು, 'ನಿರ್ವಿಕಲ್ಪ ಸಮಾಧಿಯಲ್ಲಿಯೇ ಮಗ್ನನಾಗಿರುವಂತೆ ಕರುಣಿಸಿ' ಎಂದು ಪ್ರಾರ್ಥಿಸಿದಾಗ ಅವರು ನಾನು ಸ್ವಾರ್ಥಿಯೆಂದೂ ಅತಿ ತುಚ್ಛ ಮನೋಭಾವದವನೆಂದೂ ಗದರಿಸಿದರು. ಅವರ ಆಣತಿಯಂತೆ ನಾನು ಕಾರ್ಯದಲ್ಲಿ ತೊಡಗುವೆ. ತಮಸ್ಸಿನಲ್ಲಿ ಮುಳುಗಿರುವ ನಮ್ಮ ದೇಶವಾಸಿಗಳನ್ನು ಎಚ್ಚರಗೊಳಿಸಿ ಸ್ವಾವಲಂಬಿಗಳಾಗಿ ಕರ್ಮಯೋಗಿಗಳನ್ನಾಗಿಸಲು ಸಾವಿರ ಸಲ ಘೋರ ನರಕಕ್ಕೂ ಸಂತೋಷದಿಂದ ಹೋಗಬಲ್ಲೆ."

ಹೀಗೆ ಹೇಳುತ್ತಲೇ ಅವರ ಕಂಠ ಗದ್ಗದವಾಯಿತು, ಕಣ್ಣುಗಳು ತುಂಬಿಬಂದುವು. ಅವರಿದ್ದ ಕೋಣೆಯನ್ನು ಬಿಟ್ಟು ಹೊರಟು ಹೋದರು. ಸೋದರಶಿಷ್ಯರು ಅವರನ್ನು ಸಂತೈಸಲು ಹೋದಾಗ ಮತ್ತೆ ಅವರೆಂದರು, "ನಾನು ರಾಮಕೃಷ್ಣರ ಗುಲಾಮ. ಅವರು ಬಿಟ್ಟು ಹೋದ ಕಾರ್ಯವನ್ನು ಪೂರ್ಣಗೊಳಿಸುವ ತನಕ

ನನಗೆ ಅದೆಲ್ಲಿಯ ವಿಶ್ರಾಂತಿ?" ೧೮೮೪ರಷ್ಟು ಹಿಂದೆಯೇ, ದಕ್ಷಿಣೇಶ್ವರದಲ್ಲಿ ಶ್ರೀರಾಮಕೃಷ್ಣರು ಸ್ವಾಮೀಜಿಯವರಿಗೆ, "ಮನುಜರನ್ನು ಭಗವಂತನೆಂದೇ ತಿಳಿದು ಅವರ ಸೇವೆಯನ್ನು ಮಾಡು" ಎಂದಿದ್ದರು.

ಈ ಹಿನ್ನೆಲೆಯಲ್ಲಿ ಶ್ರೀರಾಮಕೃಷ್ಣರ ಆದೇಶದಂತೆ ಹಾಗೂ ಸ್ವಾಮಿ ವಿವೇಕಾನಂದರ ಭಾವಾದರ್ಶಕ್ಕನುಗುಣವಾಗಿ ರಾಮಕೃಷ್ಣ ಮಹಾಸಂಘ ಸ್ಥಾಪನೆಯಾಯಿತು. ಅದರ ಹತ್ತಾರು ಶಾಖೆಗಳು ಅತಿ ಶೀಘ್ರದಲ್ಲಿಯೇ ದೇಶದಾದ್ಯಂತ ಹುಟ್ಟಿಕೊಂಡವು. ಅವುಗಳಲ್ಲಿ ಪುಣ್ಯನಗರಿ ವಾರಾಣಸಿಯಲ್ಲಿ ಒಂದು ಅಪೂರ್ವ ಸಂಸ್ಥೆ ಜನ್ಮ ತಾಳಿದ ವೃತ್ತಾಂತವು ಸ್ವಾರಸ್ಯಕರವೂ ಸ್ಫೂರ್ತಿದಾಯಕವೂ ಆಗಿದೆ.

ವಿಶ್ವವಿಜೇತ ಸ್ವಾಮಿ ವಿವೇಕಾನಂದರು ಪ್ರಥಮ ಬಾರಿ ಪಾಶ್ಚಾತ್ಯ ದೇಶಗಳಿಂದ ಕೊಲ್ಕತಾಗೆ ಮರಳಿದಾಗ ಅವರಿದ್ದ ಗಾಡಿಯ ಕುದುರೆಗಳನ್ನು ಬಿಚ್ಚಿ, ಹೆಮ್ಮೆಗೌರವಗಳಿಂದ ಗಾಡಿಯನ್ನು ಸ್ವತಃ ಎಳೆದ ಯುವಕರಲ್ಲಿ ಚಾರುಚಂದ್ರರೂ (ಮುಂದೆ ಸ್ವಾಮಿ ಶುಭಾನಂದ) ಒಬ್ಬರು. ಸ್ವಾಮೀಜಿಯವರಿಂದ ಸ್ಫೂರ್ತಿಯನ್ನು ಪಡೆದ ಅವರಿಗೆ ನಂತರ ಶ್ರೀರಾಮಕೃಷ್ಣರ ನೇರಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ನಿರಂಜನಾನಂದರ ಸಂಸರ್ಗವೂ ವಿಶೇಷವಾಗಿ ಲಭಿಸಿತ್ತು. ನಂತರ ಅವರು ತಮ್ಮ ವೃದ್ಧ ಮಾತಾಪಿತರೊಡನೆ ಮುಕ್ತಿಕ್ಷೇತ್ರವೆಂದು ಪ್ರಸಿದ್ಧವಾದ ಕಾಶಿನಗರಿಯಲ್ಲಿ ನೆಲೆಸಿದರು; ಸಾಧನೆ–ಭಜನೆ–ಸಾಧುಸಂಗದಲ್ಲಿ ತೊಡಗಿದರು. ಜೊತೆಜೊತೆಗೆ ಪೂರ್ವ ಪರಿಚಿತರಾದ ಸ್ವಾಮಿ ಶುದ್ಧಾನಂದರಿಂದ ಪ್ರಕಟವಾಗುತ್ತಿದ್ದ 'ಉದ್ಬೋಧನ' ಪತ್ರಿಕೆಯ ಸಹಕಾರದಿಂದ ರಾಮಕೃಷ್ಣ–ವಿವೇಕಾನಂದರ ಅಧ್ಯಯನವನ್ನು ಕೈಗೊಂಡರು. ಅವರೊಡನೆ ಸಮವಯಸ್ಕ ಹಾಗೂ ಸಮಮನಸ್ಕ ಸಂಗಡಿಗರಾದ ಕೇದಾರನಾಥ ಮಲ್ಲಿಕ್ (ಮುಂದೆ ಕೇದಾರ ಬಾಬಾ–ಸ್ವಾಮಿ ಅಚಲಾನಂದ), ಜಾಮಿನಿ ರಂಜನ್ ಮಜುಮ್ದಾರ್, ಹರಿದಾಸ ತಯೇದಾರ್ (ಮುಂದೆ ಸ್ವಾಮಿ ಸದಾಶಿವಾನಂದ) ಇದ್ದರು. ಇದೇ ಸಮಯದಲ್ಲಿ ಸ್ವಾಮಿ ನಿರಂಜನಾನಂದರು ಕಾಶಿಗೆ ಬಂದರು. ಅವರನ್ನು ತಮ್ಮಲ್ಲಿಗೆ ಆಮಂತ್ರಿಸಿದ ಯುವಕರು ಅವರ ದಿವ್ಯ ಉಪಸ್ಥಿತಿ ಹಾಗೂ ಸ್ಫೂರ್ತಿ ನುಡಿಗಳಿಂದ ಪ್ರಭಾವಿತರಾದರು.

ಸ್ವಾಮಿ ನಿರಂಜನಾನಂದರು ಹರಿದ್ವಾರಕ್ಕೆ ತೆರಳಿದ ಸ್ವಲ್ಪ ಸಮಯದಲ್ಲೇ ಕಾಶಿಗೆ ಬಂದ ಸ್ವಾಮಿ ಕಲ್ಯಾಣಾನಂದರು ಕೇದಾರನಾಥರ ಮನೆಯಲ್ಲಿ ತಂಗಿದ್ದರು. ಸ್ವಾಮಿ ಕಲ್ಯಾಣಾನಂದರು ಸ್ವಾಮಿ ವಿವೇಕಾನಂದರ ಶಿಷ್ಯರು; ಹರಿದ್ವಾರದ ಕನ್‌ಖಿಲ್‌ನಲ್ಲಿರುವ ಸೇವಾಶ್ರಮದ ಸ್ಥಾಪಕರು. ಅವರ ಭಾವಭರಿತ ನುಡಿಗಳು ಚಾರುಚಂದ್ರ ಮುಂತಾದವರ ಮನದಲ್ಲಿ ಸ್ವಾಮೀಜಿಯವರ ಭಾವಾದರ್ಶಗಳನ್ನು ಸದೃಢಗೊಳಿಸಿದವು. ಚಾರುಚಂದ್ರರ ನೇತೃತ್ವದಲ್ಲಿ ವಾರಾಣಸಿಯಲ್ಲಿ ಸದ್ದುಗದ್ದಲವಿಲ್ಲದೆ ಸುಸಂಸ್ಕೃತ ಆದರ್ಶ ಯುವಕರ ಸಂಘವೊಂದು ಮೂಡಿಬಂತು. ಈ ಸಂಘದ ಗೋಷ್ಠಿಗಳಲ್ಲಿ 'ಉದ್ಬೋಧನ' ಪತ್ರಿಕೆಯ ಲೇಖನಗಳನ್ನು ಓದುತ್ತಿದ್ದಂತೆ, ಅಲ್ಲಿ ಮೂಡಿಬರುತ್ತಿದ್ದ ಸ್ವಾಮಿ ವಿವೇಕಾನಂದರ ವೇದಾಂತವಾಣಿಗಳು ಯುವಕರ ಹೃನ್ಮನಗಳಲ್ಲಿ ಗಾಢವಾದ ಪ್ರಭಾವವನ್ನು ಬೀರಿದವು. ಒಂದು ದಿನ ಚಾರುಚಂದ್ರರು ಬಂಧುಗಳನ್ನುದ್ದೇಶಿಸಿ ಹೀಗೆ ನುಡಿದರು: "ಸ್ವಾಮೀಜಿಯವರ ಉಕ್ತಿಗಳನ್ನಾಲಿಸಿರಿ – 'ನೀವೇನು ಕಣ್ಣುಮುಚ್ಚಿ ಮೂಲೆಯಲ್ಲಿ ಕುಳಿತಿರುವಿರಾ? ನಿಮ್ಮೆದುರು ಇರುವ ವ್ಯಾಧಿಪೀಡಿತ, ದುಃಖಿ ದಾರಿದ್ರ್ಯದಲ್ಲಿ ನರಳಾಡುವ ಮನುಜರು ನಿಮಗೆ ಕಾಣುವುದಿಲ್ಲವೇ? ಅವರೇ ನಮ್ಮ ದೇವರು – ನಮ್ಮ ನಾರಾಯಣ – ನಮ್ಮ ಶಿವ.' ಸೋದರ ಜಾಮಿನಿ, ಕೇಳು. ಸ್ವಾಮೀಜಿಯವರೆನ್ನುತ್ತಾರೆ, 'ಜಗತ್ತಿನ ಪ್ರತಿಯೊಂದು ಜೀವಿಯಲ್ಲಿಯೂ ಭಗವಂತನು ನೆಲೆಸಿರುತ್ತಾನೆ. ಸರ್ವಭೂತಗಳಲ್ಲಿ ಬ್ರಹ್ಮತತ್ತ್ವವು ವಿರಾಜಮಾನವಾಗಿರುವುದು. ಈ ಭಾವವನ್ನು ಜಾಗೃತಗೊಳಿಸುವುದೇ ಸಕಲ ಸಾಧನೆ, ಧರ್ಮ ಹಾಗೂ ಕರ್ಮಗಳ ಸಾರ.' ಇಂದು ಸ್ವಾಮಿ ವಿವೇಕಾನಂದರು ನಮಗೆ ಕಲಿಸುತ್ತಿರುವುದು ಇದನ್ನೇ. ಅವರ ಭಾವದಲ್ಲಿ ಅನುಪ್ರಾಣಿತರಾಗಿ ನಮ್ಮ ವೈಯಕ್ತಿಕ ಜೀವನವನ್ನು ಉನ್ನತಗೊಳಿಸಿ ಶಕ್ತಿಸಂಪನ್ನವಾಗಿಸಿಕೊಳ್ಳುವುದೇ ಶ್ರೇಷ್ಠ ಧರ್ಮಸಾಧನೆ."

ಇದನ್ನು ಕೇಳಿದ ಬಂಧು ಜಾಮಿನಿ ರಂಜನ್ ಮಜುಮ್ದಾರನ ದೇಹ–ಮನಗಳಲ್ಲಿ ಸ್ವಾಮೀಜಿಯವರ ಭಾವವು ವಿದ್ಯುತ್ತಿನಂತೆ ಸಂಚರಿಸಿತು. ಪ್ರತಿದಿನ ಬೆಳಗ್ಗೆ ಗಂಗಾಸ್ನಾನ, ವಿಶ್ವನಾಥ–ಅನ್ನಪೂರ್ಣೆಯರ ದರ್ಶನ ಮಾಡಿ, ಅನ್ನಛತ್ರದಲ್ಲಿ ಪ್ರಸಾದವನ್ನು ಸ್ವೀಕರಿಸಿ, ಸಾಧನೆ– ಭಜನೆಗಳಲ್ಲಿ ದಿನಗಳನ್ನು ಈತ ಕಳೆಯುತ್ತಿದ್ದ.

ಒಂದು ಮುಂಜಾನೆ ಗಂಗಾಸ್ನಾನಕ್ಕೆಂದು ಹೋಗುತ್ತಿದ್ದಾಗ ರಸ್ತೆಯಂಚಿನಲ್ಲಿ ಸಾಯುತ್ತಿದ್ದ ವೃದ್ಧೆಯೊಬ್ಬಳನ್ನು ಕಂಡು ಆತನ ಹೃದಯ ಕರಗಿತು. ಮಲಮೂತ್ರದಿಂದ ಕೊಳಕಾಗಿದ್ದ ಆಕೆಯನ್ನು ನಿಸ್ಸಂಕೋಚವಾಗಿ ಮೇಲೆತ್ತಿ ತನ್ನದೇ ಬಟ್ಟೆಯಿಂದ ಆಕೆಯ ಶರೀರವನ್ನು ಶುದ್ಧಗೊಳಿಸಿ, ಹತ್ತಿರದ ಮನೆಯ ಜಗುಲಿಯ ಮೇಲೆ ಮಲಗಿಸಿದನು. ಬಳಿಕ ಅವಳ ಆಹಾರ–ಶೂಶ್ರೂಷೆಗಳಿಗೆ ಮುಂದಾದನು. ಅಸಹಾಯಕನಾದ ಅವನೀಗ ಏನುತಾನೆ ಮಾಡುವುದು? ಭಿಕ್ಷೆ ಬೇಡಿದಾಗ ಯಾರೋ ಒಬ್ಬ ಸಹೃದಯರು ಅತನ ಕೈಗೆ ನಾಲ್ಕಾಣೆಯ ಪಾವಲಿಯನ್ನು ಹಾಕಿದರು. ಅದರಿಂದ ಜಾಮಿನಿಯು ಕೊಂಚ ಹಾಲನ್ನು ಕೊಂಡು ವೃದ್ಧೆಗೆ ಕುಡಿಸಿದನು. ಆಕೆ ಬದುಕಿಕೊಂಡಳು. ಬಹಳಷ್ಟು ಶ್ರಮಪಟ್ಟು, ಅನೇಕ ಅಡಚಣೆಗಳನ್ನೆದುರಿಸಿ ವೃದ್ಧೆಯ ಚಿಕಿತ್ಸೆಗಾಗಿ ಸಮೀಪದ ಆಸ್ಪತ್ರೆಗೆ ಸೇರಿಸಿದನು. ಬಳಿಕ ಸ್ನೇಹಿತರಿಂದ ಸಂಗ್ರಹಿಸಿದ ಹಣವನ್ನು ಆಕೆಯ ಚಿಕಿತ್ಸೆಗಾಗಿ ವಿನಿಯೋಗಿಸಿದನು. ಭಗವಂತನ ಕೃಪೆಯಿಂದ ವೃದ್ಧೆಯು ಕ್ರಮೇಣ ಗುಣಮುಖಿಳಾದಳು. ಜಾಮಿನಿ ರಂಜನ್ ಮಜುಮ್ದಾರನ ಈ ಸೇವಾಕಾರ್ಯವು ಚಾರುಚಂದ್ರ–ಕೇದಾರನಾಥರ ಮೆಚ್ಚಿಗೆ ಪಡೆಯಿತು. ಅವರ ಪ್ರೋತ್ಸಾಹ–

ಸಮರ್ಥನೆ ಹಾಗೂ ನಾಲ್ಕಾಣೆಯ ದಾನದಿಂದ ಕಾಶಿಯಲ್ಲಿ 'ಶಿವಜ್ಞಾನದಲ್ಲಿ ಜೀವಸೇವೆ'ಯ ಶುಭಾರಂಭವಾಯಿತು.

ಮರಣೋನ್ಮುಖ ವೃದ್ಧೆಯ ಶುಶ್ರೂಷೆಯು ಸಫಲವಾದ್ದರಿಂದ ಆ ಯುವಕಸಂಘದ ಆತ್ಮವಿಶ್ವಾಸವು ವೃದ್ಧಿಸಿತು. 'ಜನಸೇವೆಯೇ ಜನಾರ್ದನ ಸೇವೆ' ಎಂದು ಅರಿತ ಅದರ ಸದಸ್ಯರು ಆರ್ತಪೀಡಿತ, ಅಸಹಾಯಕ ನರ–ನಾರಿಯರ ಸೇವೆಯನ್ನೇ 'ನಾರಾಯಣ ಸೇವೆ' ಯೆಂದು ಬಗೆದು ಮನಸಾರೆ ಕಾರ್ಯಕ್ಷೇತ್ರಕ್ಕಿಳಿದರು. ರೋಗಿನಾರಾಯಣರಿಗಾಗಿ ಔಷಧಿ, ಹಾಸಿಗೆ–ಕಂಬಳಿ ಹಾಗೂ ಆಸ್ಪತ್ರೆ ಖರ್ಚಿಗಾಗಿ ಹಣವನ್ನು ಸಂಗ್ರಹಿಸತೊಡಗಿದರು. ಕೇದಾರನಾಥರ ಮನೆಯು ಈ ಸಮಿತಿಯು ಪ್ರಧಾನ ಕಾರ್ಯಾಲಯವಾಯಿತು. ಯುವಕರು ಸೇವಾಕಾರ್ಯದೊಂದಿಗೆ ಸ್ವಾಮೀಜಿಯವರ ಗ್ರಂಥಗಳನ್ನೂ ಅಧ್ಯಯನ ಮಾಡುತ್ತ ನವಸ್ಫೂರ್ತಿಯನ್ನು ಪಡೆಯುತ್ತಿದ್ದರು. ೧೯೦೦ರ ಸೆಪ್ಟೆಂಬರ್ ತಿಂಗಳಿನಲ್ಲಿ ಐದು ರೂಪಾಯಿಗಳ ಬಾಡಿಗೆಗೆ ಕಾಶಿಯ ಜಂಗಮಬಾಡಿಯ ಒಂದು ಕೋಣೆಯಲ್ಲಿ ಈ ಯುವಕರು ಕಾರ್ಯವನ್ನು ಪ್ರಾರಂಭಿಸಿದಾಗ ಈ ಕಾರ್ಯವು ನಗರದ ಕೆಲವು ಗಣ್ಯವ್ಯಕ್ತಿಗಳ ಗಮನವನ್ನು ಸೆಳೆಯಿತು. ಈಗ ಅವರೆಲ್ಲ ಸೇರಿ, 'Poor Mens' Relief Association, Benaras' ಎಂಬ ಸಂಘಟನೆಯನ್ನು ನಿರ್ಮಿಸಿದರು. ಸೇವಾಕಾರ್ಯವು ವಿಸ್ತಾರಗೊಂಡಾಗ ೧೯೦೧ರಲ್ಲಿ ಕಾರ್ಯಾಲಯವನ್ನು ದೊಡ್ಡ ಕಟ್ಟಡಕ್ಕೆ ವರ್ಗಾಯಿಸಲಾಯಿತು. ಶ್ರೀರಾಮಕೃಷ್ಣರ ಪ್ರತ್ಯಕ್ಷಶಿಷ್ಯರಾದ ಸ್ವಾಮಿ ನಿರಂಜನಾನಂದ ಹಾಗೂ ಸ್ವಾಮಿ ಶಿವಾನಂದರ ಪ್ರೋತ್ಸಾಹದಿಂದ ಈ ಕಾರ್ಯವು ಸಾಂಗವಾಗಿ ಮುನ್ನಡೆಯಿತು. ಕಟ್ಟಡದ ನೆಲಮಾಳಿಗೆಯಲ್ಲಿ ಆಸ್ಪತ್ರೆಯೂ, ಮಹಡಿಯ ಮೇಲೆ ಚಾರುಚಂದ್ರರ ವಾಸಸ್ಥಾನವೂ ಇತ್ತು. ಯುವಕರ ಶ್ರದ್ಧೆಯನ್ನು ಕಂಡ ಕೆಲವು ವೈದ್ಯರು ಉಚಿತ ಚಿಕಿತ್ಸೆಯನ್ನೂ, ಔಷಧಿಗಳನ್ನೂ ನೀಡಲಾರಂಭಿಸಿದರು. ಒಂದು ವರ್ಷದಲ್ಲಿ ೨೬೧ ಮಂದಿಗೆ ಸೇವೆಯನ್ನು ನೀಡಲಾಯಿತು.

ಎರಡನೆಯ ಬಾರಿ ಪಾಶ್ಚಾತ್ಯ ದೇಶದಿಂದ ಮರಳಿದ ಸ್ವಾಮಿ ವಿವೇಕಾನಂದರು ವಾರಾಣಸಿಯ ಸೇವಾಕಾರ್ಯದ ಬಗ್ಗೆ ತಿಳಿದು ಬಹಳ ಸಂತೋಷಗೊಂಡರು. ಕಾಶಿಯಿಂದ ಬೇಲೂರು ಮಠಕ್ಕೆ ಹೋದವರಿಂದ ಇಲ್ಲಿನ ಸೇವಾಕಾರ್ಯದ ಬಗ್ಗೆ ವಿಚಾರಿಸುತ್ತಿದ್ದರು. ಒಮ್ಮೆ ಜಾಮಿನಿ ರಂಜನ್ ಮಜುಮ್ದಾರ್ ಸ್ವಾಮೀಜಿಯವರ ದರ್ಶನಕ್ಕೆಂದು ಹೋದಾಗ ಅವರು, "ಇಂಥ ಆಶ್ರಮಗಳು ಭಾರತದಾದ್ಯಂತ ಪ್ರತಿಯೊಂದು ತೀರ್ಥಕ್ಷೇತ್ರದಲ್ಲೂ ಇರಬೇಕು... ಏನೇ ಆಗಲಿ, ಕಾಶಿಯ ಹುಡುಗರು ನನ್ನಿಂದ ಸ್ಫೂರ್ತಿಪಡೆದು ಸ್ವಲ್ಪ ಕಾರ್ಯವನ್ನು ಮಾಡಿದ್ದಾರೆ" ಎಂದು ತಮ್ಮ ಮೆಚ್ಚುಗೆಯನ್ನು ಪ್ರಕಟಿಸಿದರು.

೧೯೦೨ರ ಜನವರಿಯಲ್ಲಿ ಸ್ವಾಮಿ ವಿವೇಕಾನಂದರು ಈ ಸೇವಾಕಾರ್ಯವನ್ನು ಸ್ವತಃ ನೋಡಲು ಉತ್ಸುಕರಾದರು. ಸ್ವಾಮಿ ನಿರ್ಭಯಾನಂದ, ಸ್ವಾಮಿ ಬೋಧಾನಂದ ಹಾಗೂ ಜಪಾನಿನ ಶಿಲ್ಪಿ ಓಕಾಕುರಾ ಮುಂತಾದವರೊಡನೆ ಕಾಶಿಗೆ ಆಗಮಿಸಿದರು. ವಿಶ್ವವಿಖ್ಯಾತರಾದ ಅವರನ್ನು ಕಾಣಲು ಕಾಶಿಯ ಪಂಡಿತರು, ಶಾಸ್ತ್ರಜ್ಞರು ಹಾಗೂ ಜನಸಾಮಾನ್ಯರು ನೆರೆಯುತ್ತಿದ್ದರು. ಇದೇ ಸಮಯದಲ್ಲಿ ಚಾರುಚಂದ್ರರೂ ಸ್ವಾಮೀಜಿಯವರ ಹತ್ತಿರದ ಸಂಪರ್ಕಕ್ಕೆ ಬಂದರು. ಸೇವಾಕಾರ್ಯವನ್ನು ಕೂಲಂಕಷವಾಗಿ ವೀಕ್ಷಿಸಿದ ಸ್ವಾಮೀಜಿಯ ಕಣ್ಣುಗಳಿಗೆ ಅದರ ಹಿನ್ನೆಲೆಯ ಕೆಲವು ಲೋಪದೋಷಗಳು ಗೋಚರವಾಗದೆ ಇರಲಿಲ್ಲ. ಯುವಕರನ್ನುದ್ದೇಶಿಸಿ ಸ್ವಾಮೀಜಿ ಹೀಗೆ ಹೇಳಿದರು: "ಸರ್ವಜೀವಿಗಳಲ್ಲಿ ಈಶ್ವರನನ್ನು ಕಾಣುತ್ತ ಸೇವೆಗೈಯಬೇಕು. ಆದರೆ ನೀವು ದಯೆಗೆ ಉಚ್ಚ ಸ್ಥಾನವನ್ನು ನೀಡಿರುವಿರಿ. ಇತರರಿಗೆ ದಯೆತೋರುವುದರಲ್ಲಿ ದರ್ಪಾಹಂಕಾರಗಳು ಅಡಗಿರುತ್ತವೆ. ನಾವು ಇತರರ ಸೇವೆಯನ್ನು ಮಾಡಬಹುದಷ್ಟೆ ದಯೆ ತೋರುವ ಅಧಿಕಾರ ನಮಗಿಲ್ಲ. ನೀವು ಅದೆಂಥ Poor mens' relief ಮಾಡುವಿರಿ? ನಿಮ್ಮ ಸಮಿತಿಯ ಹೆಸರನ್ನು ಬದಲಾಯಿಸಿ, Home of Service (ಸೇವಾಶ್ರಮ) ಎಂದು ಇಡಿ" ಎಂಬ ಸೂಕ್ತ ಸಲಹೆಯನ್ನಿತ್ತರು. ಅವರ ನಿರ್ದೇಶನದಂತೆ ಯುವಕರು ತಮ್ಮ ಸಂಘಟನೆಗೆ Ramakrishna Home of Service (ರಾಮಕೃಷ್ಣ ಸೇವಾಶ್ರಮ) ಎಂದು ಮರುನಾಮಕರಣ ಮಾಡಿದರು.

ಸ್ವಾಮಿ ವಿವೇಕಾನಂದರು ಇಲ್ಲಿನ ಕಾರ್ಯಕರ್ತರಲ್ಲಿ ಹಲವರಿಗೆ ಮಂತ್ರದೀಕ್ಷೆಯನ್ನಿತ್ತು ಅವರ ಜೀವನವನ್ನು ಪಾವನಗೊಳಿಸಿದರು. ಸೇವಾಶ್ರಮದ ಸೇವಕರು ಸಮರ್ಪಿತ ಭಾವದಿಂದ ಸೇವಾಕಾರ್ಯವನ್ನು ನಿರ್ವಹಿಸುತ್ತಿದ್ದರೂ ಅವರಿಗೆ ಪುಷ್ಟಿಕರ ಆಹಾರ ಇಲ್ಲದಿದ್ದುದನ್ನು ಗಮನಿಸಿದ ಸ್ವಾಮೀಜಿಯವರು ಅವರೆಲ್ಲರಿಗೆ ತಾವಿಳಿದುಕೊಂಡಿದ್ದ ತಾಣದಲ್ಲೇ ಭೋಜನದ ಏರ್ಪಾಟನ್ನೂ ಮಾಡಿದರು. ಸ್ವಾಮೀಜಿಯವರಿಗೆ ಚಾರುಚಂದ್ರ ಮುಂತಾದವರ ಮೇಲಿದ್ದ ಪ್ರೀತಿ ಅಗಾಧ ಹಾಗೂ ಕಲ್ಪನಾತೀತ.

ಸ್ವಾಮಿ ವಿವೇಕಾನಂದರ ವೇದಾಂತ ಪ್ರಚಾರವು ಜೀವಕಲ್ಯಾಣಕ್ಕಾಗಿಯೇ; ಈ ಕಾರ್ಯಕ್ಕಾಗಿಯೇ ಅವರು ಧರೆಗಳಿದು ಬಂದುದು; ಸಕಲ ಸಂನ್ಯಾಸಿಮಂಡಲ ಹಾಗೂ ಹಿಂದೂಧರ್ಮವು ಅವರಿಗೆ ಚಿರಋಣಿಗಳು – ಹೀಗೆ ಅಭಿನಂದಿಸುತ್ತ ಕಾಶಿಯ ಗಣ್ಯರು ಸ್ವಾಮೀಜಿಯ ಕಾರ್ಯಕ್ಕೆ ಬೆಂಬಲ ನೀಡಿದರು. ಶಿವಾನಂದರೆಂಬ ವಿದ್ವಾಂಸರು ಪಂಡಿತ ಮಹಾಸಭೆಯಲ್ಲಿ ಮುಕ್ತ ಕಂಠದಿಂದ ಸ್ವಾಮೀಜಿಯವರ ಗುಣಗಾನ ಮಾಡುತ್ತ ಅವರ ನಿಕಟ ಒತ್ತೈಷಿಗಳಾದರು. ಧರ್ಮನಿಷ್ಠ ಜಮೀನುದಾರರಾದ ಉದಯ ಪ್ರತಾಪ ಸಿಂಹರು ಸ್ವಾಮೀಜಿಯವರನ್ನು ತಮ್ಮಲ್ಲಿಗೆ ಆಹ್ವಾನಿಸಿ ಕಾಶಿಯಲ್ಲಿ ವೇದಾಂತ ಪ್ರಚಾರಕ್ಕೆಂದು ಧನಸಹಾಯ ಮಾಡಿದರು. ಇದರಿಂದ ರಾಮಕೃಷ್ಣ ಅದ್ವೈತ ಆಶ್ರಮದ ಸ್ಥಾಪನೆ ಆಯಿತು.

ಸ್ವಾಮಿ ವಿವೇಕಾನಂದರು ಕಾಶಿಯಲ್ಲಿ ಸುಮಾರು ಮೂರು ವಾರಗಳ ಕಾಲ ತಂಗಿದ್ದರು. ಅನಂತರ ಬೇಲೂರು ಮಠಕ್ಕೆ ಹಿಂದಿರುಗುವ ಮುನ್ನ, ಚಾರುಚಂದ್ರ ಮುಂತಾದವರು ಅವರನ್ನು ಸೇವಾಶ್ರಮದ ಸಹಾಯಕ್ಕಾಗಿ ಒಂದು 'ಮನವಿ' (Appeal) ತಯಾರು ಮಾಡಿಕೊಡಲು ಕೇಳಿಕೊಂಡರು. ಆಗ ಸ್ವಾಮೀಜಿ ಅದಕ್ಕೆ ಸಂತೋಷದಿಂದ ಒಪ್ಪಿಕೊಂಡರು. ಅದರಲ್ಲಿ ಅವರು ಹೀಗೆ ಬರೆದಿದ್ದಾರೆ: " ...ಬನ್ನಿ, ನಮ್ಮೊಡನೆ ಸಹಕರಿಸಿ. ಈ ಸೇವಾಕಾರ್ಯದಲ್ಲಿ ನಿಮ್ಮ ಕೊಡುಗೆಯು ಕೇವಲ ಕಣದಷ್ಟಾದರೂ, ನೀವು ನೀಡುವ ನೆರವು ಅತ್ಯಲ್ಪವಾದರೂ, ಹಳೆಯ ನಾಣ್ಯುಡಿಯಂತೆ, ಕ್ಷುದ್ರ ಹುಲ್ಲುಕಡ್ಡಿಗಳನ್ನು ಸೇರಿಸಿ ಬೆಸೆದ ಹಗ್ಗವು ಮಹಾಮತ್ತ ಗಜರಾಜನನ್ನೂ ಕಟ್ಟಿಹಾಕಲು ಸಮರ್ಥವಾಗುತ್ತದೆ."

ಸ್ವಾಮೀಜಿಯವರ ಹಸ್ತಾಕ್ಷರವಿದ್ದ ಈ ಪ್ರಪ್ರಥಮ ಮನವಿಯ ಐತಿಹಾಸಿಕ ಮೌಲ್ಯ ಅಸಾಧಾರಣ. ಅದು ಮಂತ್ರದಂತೆ ಕೆಲಸ ಮಾಡಿತು. ಸ್ವಾಮೀಜಿಯವರ ಪಾಶ್ಚಾತ್ಯ ಶಿಷ್ಯೆಯಾದ ಸೋದರಿ ನಿವೇದಿತಾ ಕೂಡ ಭಾಷಣಗಳ ಮೂಲಕವೂ, ಇತರ ರೀತಿಯಲ್ಲಿಯೂ ಸೇವಾಶ್ರಮದ ಕಾರ್ಯದಲ್ಲಿ ಸಹಕರಿಸಿದರು. ಸ್ಥಳೀಯ ಜನತೆಯೂ ಸೇವಾಶ್ರಮದತ್ತ ಒಲವು ತೋರಿಸಿದ ಕಾರಣವಾಗಿ, ಜನಸಹಾಯ, ಅರ್ಥಸಹಾಯಗಳೆರಡೂ ಒದಗಿ ಬಂದು ಕಾರ್ಯವು ಮತ್ತೂ ವಿಸ್ತಾರಗೊಂಡಿತು. ೧೯೦೨ರ ನವೆಂಬರ್ ೨೩ರಂದು ಸೇವಾಶ್ರಮವನ್ನು ರಾಮಕೃಷ್ಣ ಮಿಷನ್ನಿಗೆ ಸೇರಿಸುವ ನಿರ್ಣಯವನ್ನು ತೆಗೆದುಕೊಳ್ಳಲಾಯಿತು. ಇದರಿಂದಾಗಿ ಸಂಸ್ಥೆಯ ಹೆಸರು 'Ramakrishna Mission Home of Service' – 'ರಾಮಕೃಷ್ಣ ಮಿಷನ್ ಸೇವಾಶ್ರಮ' ಎಂದಾಯಿತು.

ಮಿಷನ್ನಿನ ಆಡಳಿತದಲ್ಲಿ ಕಾರ್ಯವು ಅಚ್ಚುಕಟ್ಟಾಗಿಯೂ ನಿಯಮಬದ್ಧವಾಗಿಯೂ ನಡೆದುಕೊಂಡು ಬಂತು. ರಾಮಕೃಷ್ಣ ಮಹಾಸಂಘದ ಅಂದಿನ ಪರಮಾಧ್ಯಕ್ಷರಾದ ಸ್ವಾಮಿ ಬ್ರಹ್ಮಾನಂದರ ಆದೇಶದಂತೆ ಸ್ವಂತ ಜಾಗಕ್ಕಾಗಿ ಧನಸಹಾಯವನ್ನು ಕೋರಲಾಯಿತು. ಲಕ್ಸಾ ಕ್ಷೇತ್ರದಲ್ಲಿ, ರಾಮಕೃಷ್ಣ ಅದ್ವೈತ ಆಶ್ರಮದ ಪಕ್ಕದಲ್ಲಿದ್ದ ಪಾಳುಬಿದ್ದ ಉದ್ಯಾನವನ್ನು ೧೯೦೬ರಲ್ಲಿ ಸೇವಾಶ್ರಮಕ್ಕಾಗಿ ಖರೀದಿಸಲಾಯಿತು. ಸ್ವಾಮಿ ವಿಜ್ಞಾನಾನಂದರು ಕಟ್ಟಡದ ನಿರ್ಮಾಣ ಕಾರ್ಯವನ್ನು ಕೈಗೊಂಡರು. ೧೯೦೯ರಲ್ಲಿ ಸೇವಾಶ್ರಮದ ನೋಂದಣಿಯಾಯಿತು. ೧೯೧೦ರಲ್ಲಿ ಸ್ವಾಮಿ ಬ್ರಹ್ಮಾನಂದರು ನೂತನ ಕಟ್ಟಡವನ್ನು ಉದ್ಘಾಟಿಸಿದರು. ಪಾಳು ಬಿದ್ದಿದ್ದ ಹಳೆಯ ಉದ್ಯಾನದಲ್ಲಿ ನೂತನ ಸೇವಾಶ್ರಮವು ಅನಾಥ ಹಾಗೂ ಬಡ ರೋಗಿಗಳ ಸೇವಾಕಾರ್ಯದಲ್ಲಿ ತೊಡಗಿಸಿಕೊಂಡಿತು.

ಶ್ರೀರಾಮಕೃಷ್ಣರ ಲೀಲಾಸಂಗಿನಿ ಶ್ರೀಮಾತೆ ಶಾರದಾದೇವಿಯವರ ಕೃಪಾಶೀರ್ವಾದಗಳು ಸೇವಾಶ್ರಮಕ್ಕೆ ಲಭಿಸಿರುವುದು ಅತ್ಯಂತ ಪುಣ್ಯಕರ ಸಂಗತಿ. ೧೯೧೨ರಲ್ಲಿ ಶ್ರೀವಿಶ್ವನಾಥ – ಅನ್ನಪೂರ್ಣೆಯರ ಸನ್ನಿಧಿಯಾದ ಕಾಶಿಗೆ ಬಂದಾಗ, ಹತ್ತಿರದ 'ಲಕ್ಷ್ಮೀ ನಿವಾಸ'ದಲ್ಲಿ ತಂಗಿದ್ದ ಶ್ರೀಮಾತೆಯವರನ್ನು ಪಲ್ಲಕ್ಕಿಯಲ್ಲಿ ಸೇವಾಶ್ರಮಕ್ಕೆ ಕರೆತರಲಾಯಿತು. ಆಸ್ಪತ್ರೆಯ ವಾರ್ಡುಗಳಲ್ಲಿ ತಾವು ಕಣ್ಣಾರೆ ಕಂಡ ಸೇವಾಕಾರ್ಯದಿಂದ ಪ್ರಸನ್ನರಾದ ಅವರು, "ಇಲ್ಲಿ ಶ್ರೀರಾಮಕೃಷ್ಣರೇ ಸ್ವಯಂ ವಿರಾಜಮಾನರಾಗಿದ್ದಾರೆ. ಲಕ್ಷ್ಮೀ ದೇವಿಯು ಇಲ್ಲಿ ನೆಲೆಸಿರುವಳು... ನನಗೂ ಇಲ್ಲಿಯೇ ಇದ್ದು ಬಿಡೋಣವೆನಿಸುತ್ತಿದೆ" ಎಂದಾಗ ಎಲ್ಲರಿಗೂ ತಮ್ಮ ಜೀವನ ಸಾರ್ಥಕವೆನಿಸಿತು. ಬಳಿಕ ಅವರು ಲಕ್ಷ್ಮೀನಿವಾಸಕ್ಕೆ ತೆರಳಿ ಹತ್ತು ರೂಪಾಯಿಗಳ ನೋಟೊಂದನ್ನು ಸೇವಾಶ್ರಮದ ಕಾರ್ಯಕ್ಕಾಗಿ ಕಳುಹಿಸಿಕೊಟ್ಟರು. ಶ್ರೀಮಾತೆಯವರ ಈ ಪವಿತ್ರ ಕೊಡುಗೆಯನ್ನು ಸೇವಾಶ್ರಮದ ಕಾರ್ಯಾಲಯದಲ್ಲಿ ಇಂದಿಗೂ ಕಾಣಬಹುದು. ಶ್ರೀಮಾತೆ ಶಾರದಾದೇವಿ, ಸ್ವಾಮಿ ವಿವೇಕಾನಂದ ಹಾಗೂ ಸ್ವಾಮಿ ಬ್ರಹ್ಮಾನಂದರಲ್ಲದೆ ಶ್ರೀರಾಮಕೃಷ್ಣರ ಸಾಕ್ಷಾತ್ ಶಿಷ್ಯರಾದ ಇತರ ಸಂನ್ಯಾಸಿಗಳಿಂದಲೂ ನಿರಂತರವಾಗಿ ಹರಿದುಬಂದ ಪ್ರೇಮಪ್ರವಾಹವು ಕಾರ್ಯತತ್ಪರ ಸೇವಕವೃಂದವನ್ನು ಆಧ್ಯಾತ್ಮಿಕ ಲಕ್ಷ್ಯದೆಡೆಗೆ ಮುನ್ನಡೆಸಿತು. ಉದಾರ ಜನತೆಯ ತನು-ಮನ-ಧನ ಸಹಾಯದಿಂದ ಕಾಲಕ್ರಮೇಣ ಆಶ್ರಮದ ಚಟುವಟಿಕೆಗಳು ಅಭಿವೃದ್ಧಿಗೊಂಡವು.

ಸಾಧುಗಳೂ, ಸೇವಾವ್ರತಿಗಳೂ, ಕಾರ್ಯಕರ್ತರೂ ಕಾರ್ಯನಿರತರಾಗಿರುವ ಈ ಸೇವಾಶ್ರಮದ ಇತಿಹಾಸದ ಪುಟಗಳಲ್ಲಿ ಬನ ಬಿಹಾರಿ ಬಾಬಾ (ಸ್ವಾಮಿ ಮುಕ್ತಾನಂದ) ಅವರ ಹೆಸರನ್ನು ಸ್ವರ್ಣಾಕ್ಷರಗಳಲ್ಲಿ ಬರೆಯಬೇಕಾಗುತ್ತದೆ. ಶ್ರೀರಾಮಕೃಷ್ಣರ ಸಾಕ್ಷಾತ್ ಶಿಷ್ಯರಾದ ಸ್ವಾಮಿ ಶಿವಾನಂದಜಿ ಅವರ ಶಿಷ್ಯರಾಗಿದ್ದ ಇವರು ತಮ್ಮ ಜೀವನದ ಅಂತ್ಯದವರೆಗೆ ಸತತ ೬೭ ವರ್ಷಗಳ ದೀರ್ಘಕಾಲ ರೋಗಿ ನಾರಾಯಣರ ಸೇವೆಯಲ್ಲಿಯೇ ಸಂಪೂರ್ಣ ಸೇವಾಭಾವದಿಂದ ಅನುಕ್ಷಣವೂ ನಿರತರಾಗಿ, ಸೇವಾವ್ರತಿಗಳಿಗೆ ಸೇವೆಯ ಆದರ್ಶವನ್ನು ಬಿಂಬಿಸಿದ ಮಹಾನ್‌ಪುರುಷರು. ಸೇವಾಶ್ರಮದ ಸಾಧು-ವೈದ್ಯರೂ, ಸೇವಕ-ಕಾರ್ಯಕರ್ತರೂ ಇವರನ್ನೆಂದೂ ಮರೆಯುವಂತಿಲ್ಲ. ಬಾಬಾರವರ ಅಮೃತಹಸ್ತದಿಂದ ಸೇವೆಪಡೆದ 'ನಾರಾಯಣರು' ಇಂದಿಗೂ ಅವರನ್ನು ಕೃತಜ್ಞತೆಯಿಂದ ನೆನೆದು ಧನ್ಯರಾಗುತ್ತಾರೆ. ಇವರು ೧೯೯೬ರಲ್ಲಿ ದೇಹತ್ಯಾಗ ಮಾಡಿದರು.

ಇಂದು ಸೇವಾಶ್ರಮದ ಆಸ್ಪತ್ರೆಯ ಹೊರರೋಗಿಗಳ ವಿಭಾಗದಲ್ಲಿ ವರ್ಷಕ್ಕೆ ಸುಮಾರು ಎರಡು ಲಕ್ಷ ಜನರು ವಿಶೇಷ ತಜ್ಞರಿಂದ ವೈದ್ಯಕೀಯ ಸಲಹೆಯನ್ನು ಪಡೆಯುತ್ತಾರೆ. ರೋಗನಿಧಾನ (Pathology), ತಪಾಸಣೆ (diagnostic), Physiotherapy ವಿಭಾಗಗಳಂತಹ ಆಧುನಿಕ ಸೌಲಭ್ಯಗಳು ಜನಸಾಮಾನ್ಯರಿಗೆ ಅತಿ ಸುಲಭ ದರಗಳಲ್ಲಿ ಲಭ್ಯವಿದೆ. ೨೩೦ ಹಾಸಿಗೆಗಳುಳ್ಳ ಒಳರೋಗಿಗಳ ವಿಭಾಗದಲ್ಲಿ ಅನಾಥ ಹಾಗೂ ಬಡ ರೋಗಿಗಳಿಗೆ ಉಚಿತ ಹಾಗೂ ರಿಯಾಯಿತಿ ದರಗಳಲ್ಲಿ ಉತ್ತಮ ಸೇವೆಯನ್ನು ನೀಡಲಾಗುತ್ತಿದೆ. ಆಸ್ಪತ್ರೆಯ ಔಷಧಾಲಯವು ಉಚಿತವಾಗಿ ಅಥವಾ ಅಲ್ಪ ದರದಲ್ಲಿ ಔಷಧಿಗಳನ್ನು ವಿತರಿಸುತ್ತದೆ. ಮೋಕ್ಷನಗರಿ ಕಾಶಿಯಲ್ಲಿ ತಮ್ಮ ಅಂತಿಮ ದಿನಗಳನ್ನು ಕಳೆಯಬೇಕೆಂದು ಇಚ್ಛಿಸುವ ಪುಣ್ಯಾತ್ಮರಿಗೆ ಇಲ್ಲಿನ ವೃದ್ಧಾಶ್ರಮದಲ್ಲಿ ಆಶ್ರಯ ನೀಡಲಾಗುತ್ತದೆ. ಈ ಚಟುವಟಿಕೆಗಳು ಮಾತ್ರವಲ್ಲದೆ ಪ್ರತಿ ಭಾನುವಾರದಂದು ಗ್ರಾಮೀಣ ಆರೋಗ್ಯಸೇವೆಗಾಗಿ ಮೊಬೈಲ್ ಡಿಸ್ಪೆನ್ಸರಿ ಕಾರ್ಯನಿರತವಾಗುತ್ತದೆ. ಹಾಗೆಯೇ, ಹಳ್ಳಿಗಳ ಮತ್ತು ನಗರಪ್ರದೇಶದ ಕೊಳಚೆಗೇರಿಗಳ ಅಭ್ಯುದಯಕ್ಕಾಗಿ ಆರೋಗ್ಯ ಶಿಕ್ಷಣ ಕಾರ್ಯಕ್ರಮವನ್ನೂ ಹಮ್ಮಿಕೊಳ್ಳಲಾಗಿದೆ. ನಿರ್ಗತಿಕ ವಿಧವೆಯರಿಗೆ ಮಾಸಿಕ ನಗದು ಸಹಾಯವನ್ನೂ ಆಶ್ರಮವು ನೀಡುತ್ತದೆ. ಸೇವಾಶ್ರಮದ ಕಾರ್ಯಕರ್ತರ ಮಕ್ಕಳಿಗಾಗಿ ಅನೌಪಚಾರಿಕ ತರಗತಿಗಳನ್ನೂ ಹಾಗೂ ಹತ್ತಿರದ ಬಾಲಕ-ಬಾಲಕಿ, ಕಿಶೋರ ಹಾಗೂ ಯುವಕರಿಗೆ ಮೌಲ್ಯಶಿಕ್ಷಣ ತರಗತಿಗಳನ್ನೂ ಇತ್ತೀಚೆಗೆ ಪ್ರಾರಂಭಿಸಲಾಗಿದೆ.

ಚಿತ್ತಶುದ್ಧಿಯ ಸಾಧನೆಗಾಗಿ ನಿಃಸ್ವಾರ್ಥ ಸೇವೆಯನ್ನು ಸಲ್ಲಿಸುತ್ತ ಶ್ರೀರಾಮಕೃಷ್ಣ – ಸ್ವಾಮಿ ವಿವೇಕಾನಂದರ ಉಪದೇಶಾನುಸಾರ ಜಾತಿ, ಮತ, ಲಿಂಗಗಳ ಯಾವ ಭೇದಭಾವವೂ ಇಲ್ಲದೆ ಸೇವಾಶುಶ್ರೂಷೆಯನ್ನೊದಗಿಸಿ, ತಪ್ತಜೀವಿಗಳ ದುಃಖವನ್ನು ದೂರಗೊಳಿಸುವ ಪ್ರಯತ್ನವನ್ನು ಮಾಡುತ್ತಿರುವ ವಾರಾಣಸಿಯ ರಾಮಕೃಷ್ಣ ಮಿಷನ್ ಸೇವಾಶ್ರಮವು ಒಂದು ಅಪೂರ್ವ ಸಂಸ್ಥೆಯೇ ಸರಿ!